'ನನ್ನ ಹೆಸರು ಭಾಗ್ಯ (ಭಾಗ್ಯವತಿ) ಅಂತ. ಬೇಕಾದರೆ ನೀವು ನನ್ನ ಹೆಸರನ್ನು ಹಾಗೇ ಬರೆಯಿರಿ, ಬದಲಿಸಬೇಡಿ. ನಾನು ಸುಳ್ಳೇನೂ ಹೇಳುತ್ತಿಲ್ಲ, ನಾನು ನಿಜ ಹೇಳುತ್ತಿದ್ದೇನೆ ಯಾರಾದರೂ ನನ್ನ ಕತೆ ಕೇಳಿದರೆ ತಾನೆ. ಯಾರೂ ನನ್ನ ಕಥೆ ಕೇಳುತ್ತಿಲ್ಲ...' ಅವಳು ನನ್ನ ಕೈಹಿಡಿದುಕೊಂಡು ತಾಟಿನ ಪರದೆಯ ಹಿಂದೆ ಇದ್ದ ಮಂಚದ ಮೇಲೆ ಕರೆದೊಯ್ದಳು.

'ನನ್ನ ಮದುವೆಯ ಸಂದರ್ಭದಲ್ಲಿ ನನ್ನ ಅತ್ತೆಯ ಮನೆಯ ಕಡೆಯಿಂದ ಇಬ್ಬರು ನನಗೆ ಬಟ್ಟೆ ಹೊಲಿಯಲು ಅಳತೆ ತೆಗೆದುಕೊಳ್ಳಲು ಬಂದಿದ್ದರು. ಅವರಲ್ಲಿ ಒಬ್ಬಳು ಯುವತಿ. ನನ್ನಷ್ಟೇ ವಯಸ್ಸು ಆಕೆಗೆ. ಅವಳು ದೂರದ ನೆಂಟಸ್ತಿಕೆಯಲ್ಲಿ ನನ್ನ ನಾದಿನಿಯಾಗಬೇಕು. ಆಕೆ ನನ್ನ ಸಲ್ವಾರ್ ಕಮೀಜಿನ ಅಳತೆ ತೆಗೆದುಕೊಂಡು ಹೇಳಿದಳು, 'ಸರಿಯಾಗಿ ನನ್ನದೇ ಅಳತೆ ನಿಮ್ಮದು. ಅತ್ತಿಗೆ ನೀವು ಚಿಂತೆ ಮಾಡಬೇಡಿ. ನಾನು ಹೊಲೆಯುವ ಬಟ್ಟೆಗಳು ನಿಮಗೆ ಸರಿಹೊಂದುತ್ತವೆ.'

ಅವಳು ಹೇಳಿದ ಹಾಗೆ ನನ್ನ ಮದುವೆಯ ಉಡುಗೆಗಳು ನಿಜವಾಗಿಯೂ ಒಳ್ಳೆ ಅಳತೆಯದಾಗಿದ್ದವು. ನನ್ನ ನಾದಿನಿ ನನ್ನ ಜೊತೆ ಎಷ್ಟು ತಿಂಗಳುಗಳಿದ್ದಳೋ, ಅಲ್ಲಿಯವರೆಗೂ ಹಾಗೂ ನಂತರದಲ್ಲೂ ನನ್ನ ಬಟ್ಟೆಗಳನ್ನು ಅವಳೇ ಹೊಲಿದುಕೊಡುತ್ತಿದ್ದಳು. ನನ್ನ ಬಗ್ಗೆ ಬಹಳ ಕಾಳಜಿ ವಹಿಸುತ್ತಿದ್ದಳು. ನನಗೆ ಹೇಳುತ್ತಿದ್ದಳು, 'ಅತ್ತಿಗೆ, ನಾನು ಬರುವುದು ಎರಡು ತಿಂಗಳಾಗಲೀ, ಆರು ತಿಂಗಳಾಗಲೀ, ನೀವು ಮಾತ್ರ ಬೇರೆಯವರ ಹತ್ತಿರ ನಿಮ್ಮ ಬಟ್ಟೆಗಳನ್ನು ಹೊಲಿಸಬೇಡಿ....'

ಅವಳು ನನಗೂ ಬಹಳ ಹಿಡಿಸಿದ್ದಳು. ಆದರೆ ಅವಳಲ್ಲಿ ನನಗಿಷ್ಟವಾಗದ ಸಂಗತಿಯೆಂದರೆ, ಅವಳು ನನ್ನ ಬಟ್ಟೆಗಳನ್ನು ಹೊಲೆದಾಗಲೆಲ್ಲ ಮೊದಲು ತಾನು ಧರಿಸಿಕೊಂಡು ನೋಡುತ್ತಿದ್ದಳು. 'ನಮ್ಮಿಬ್ಬರದ್ದೂ ಒಂದೇ ಅಳತೆ. ನನಗೆಷ್ಟು ಸರಿಯಾಗಿ ಬಟ್ಟೆಗಳು ಹೊಂದುತ್ತಿವೆ ನೋಡು, ನಿನಗೂ ಸರಿಯಾಗಿ ಕೂರುತ್ತವೆ' ಎಂದು ಹೇಳುತ್ತಿದ್ದಳು.

'ಅವಳು ನನ್ನೆಲ್ಲ ಬಟ್ಟೆಗಳನ್ನು ಹೀಗೆ ಧರಿಸಿದಾಗಲೆಲ್ಲ ನನ್ನ ಮನಸ್ಸಿನಲ್ಲಿ, ಅವು ಹೊಸ ಬಟ್ಟೆಗಳಾಗಿದ್ದರೂ ಸಹ ಅವಳು ಉಟ್ಟು ಬಿಟ್ಟ ಹಳೆಯ ಬಟ್ಟೆಗಳಂತೆ ಭಾಸವಾಗುತ್ತಿದ್ದವು.'

ನೇತುಬಿದ್ದಿದ್ದ ತಾಟಿನ ಪರದೆ, ಹಗ್ಗದ ಅಳ್ಳಕವಾದ ಮಂಚ, ಅಲ್ಲಲ್ಲಿ ಹರಿದುಹೋಗಿದ್ದ ಹೊದಿಕೆ, ಹುಡುಗಿಯೂ ಚಂಚಲೆ, ಹಾಗೂ ಅಶಿಕ್ಷಿತೆ – ಆದರೆ ಈ ಭಾವನೆಗಳು ಇಷ್ಟು ನಾಜೂಕು, ಇಷ್ಟು ಕೋಮಲ... ನಾನು ಬೆಚ್ಚಿಬಿದ್ದೆ.

'ಆದರೆ ಅಮ್ಮಾ, ಅವಳ ಮನಸ್ಸು ಚಿಕ್ಕದಾಗುವುದೆಂದು ಭಾವಿಸಿ ನಾನು ನನ್ನ ಮನಸ್ಸಿನ ಮಾತುಗಳನ್ನು ಹೊರಗೆ ಎಂದೂ ಆಡಲಿಲ್ಲ.'

'ಆಮೇಲೆ?'

'ಆಮೇಲೆ ಒಂದು ಒಂದೂವರೆ ವರ್ಷಗಳ ನಂತರ ಯಾರದ್ದೋ ಮೂಲಕ ಅವಳಿಗೂ ನನ್ನ ಗಂಡನಿಗೂ ಸಂಬಂಧವಿರುವುದು ಗೊತ್ತಾಯಿತು. ನನ್ನ ಗಂಡ ಅವಳಿಗೆ ತನ್ನ ತಾತನ ಕಡೆಯ ಸಂಬಂಧದಲ್ಲಿ ಅಣ್ಣನಾಗಬೇಕು. ಆಕೆಯ ಸ್ವಂತ ಅಣ್ಣನಿಗೇ ಇದರಿಂದ ಕೆಡುಕೆನಿಸಿತು. ಅವನಂತೂ ಒಮ್ಮೆ ತನ್ನ ತಂಗಿಯ ತಲೆ ಕತ್ತರಿಸಲು ಹೊರಟಿದ್ದ. ಸ್ವಲ್ಪ ಸಮಯದ ನಂತರ ಅವಳು ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ಮೂರ್ಛೆ ತಪ್ಪಿದ್ದಳು ಎಂದು ಯಾರೋ ನನಗೆ ಹೇಳಿದರು.'

ಕಣ್ಣೀರಿನಿಂದ ತೊಯ್ದು ಹೋಗಿದ್ದ ಭಾಗ್ಯವತಿ, ನನ್ನ ಕೈಹಿಡಿದುಕೊಂಡಳು, 'ಅಮ್ಮಾ ನೀವು ನನ್ನ ಮನಸ್ಸನ್ನು ಅರ್ಥ ಮಾಡಿಕೊಳ್ಳಿ, ನನ್ನಿಂದ ಬೇರೆಯವರು ಉಟ್ಟ ಉಡುಗೆಗಳನ್ನು ಧರಿಸಲಾಗುವುದಿಲ್ಲ. ನನ್ನ ಕಸೂತಿ ಚಿತ್ತಾರದ ಅಂಚುಳ್ಳ ಸಲ್ವಾರ್‌ಗಳು, ನಕ್ಷತ್ರಗಳನ್ನು ಕೂರಿಸಿ ಹೊಲಿಯಲಾಗಿರುವ ನನ್ನ ದಾವಣಿಗಳು ಮತ್ತು ನನ್ನ ಸುಂದರವಾದ ಕಮೀಜುಗಳೆಲ್ಲವೂ ಅವಳು